# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 585 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಬಿ. ಜಿ. ಪಾಟೀಲ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 22.07.2024 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೇಂದ್ರ ಪುರಸ್ಕೃತ ಕೌಶಲ್ಯಾ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಈ ಯೋಜನೆಯ ಧ್ಯೇಯೋದ್ದೇಶ ಮತ್ತು ರೂಪು-ರೇಷೆಗಳು ಯಾವುವು; | ಹೌದು.<br><br>**<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)</u>**<br><br>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಕೇಂದ್ರ ಪುರಸ್ಕೃತ ಕೌಶಲ್ಯಾಭಿವೃದ್ಧಿ ಯೋಜನೆಗಳನ್ನು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳನ್ನು ಒಳಗೊಂಡಂತೆ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದ್ದು, ಈ ಯೋಜನೆಯಡಿ ರಾಜ್ಯದ ಯುವಜನತೆಗೆ ವಿವಿಧ ಸರ್ಕಾರೇತರ ಸಂಸ್ಥೆಗಳ ಮೂಲಕ ವಿವಿಧ ಜಾಬ್‌ರೋಲ್‌ವಾರು ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡುವುದರೊಂದಿಗೆ ಅಂತರಾಷ್ಟ್ರೀಯ ಕೌಶಲ್ಯ ತರಬೇತಿಯ ಉದ್ದೇಶವನ್ನು ಹೊಂದಿದ್ದು, ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸ್ವ-ಉದ್ಯೋಗ ಕೈಗೊಳ್ಳಲು ಹಾಗೂ ಉದ್ಯೋಗಾವಕಾಶ ಕಲ್ಪಿಸಲು ಅವಕಾಶವನ್ನು ಒದಗಿಸಿದೆ.<br><br>(ರೂಪುರೇಷಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ವಿವರಿಸಿದೆ.)<br><br>**<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u>**<br><br>**<u>ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM):</u>**<br><br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ವತಿಯಿಂದ ಡೇ-ಎನ್‌ಯುಎಲ್‌ಎಂ ಅಭಿಯಾನವನ್ನು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯದ 311 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುತ್ತದೆ.<br><br>ಸದರಿ ಅಭಿಯಾನದ ಉದ್ದೇಶ ಈ ಕೆಳಕಂಡಂತಿರುತ್ತದೆ.<br><br>• ನಗರದ ಬಡಜನರನ್ನು ಬಡತನ ರೇಖೆಯಿಂದ ಮೇಲೆ ತರುವುದು.<br>• ನಗರ ಪ್ರದೇಶದ ಮಹಿಳಾ ಸ್ವ-ಸಹಾಯ ಸಂಘ, ನಗರ/ ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಮತ್ತು ಸದಸ್ಯರ ಸಬಲೀಕರಣ.<br>• ನಗರ ಪ್ರದೇಶದಲ್ಲಿನ ಬಡವರಿಗೆ ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ಬ್ಯಾಂಕುಗಳಿಂದ ಸಾಲ ಮತ್ತು ಬಡ್ಡಿ ಸಹಾಯಧನವನ್ನು ಒದಗಿಸುವುದು.<br>• ನಗರ ಪ್ರದೇಶದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ವಿತರಣೆ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳೊಂದಿಗೆ ಸಂಪರ್ಕ ಕಲ್ಪಿಸುವುದು.<br>• ನಗರ ಪ್ರದೇಶದ ವಸತಿ ರಹಿತರಿಗೆ 24x7 ವಸತಿ ತಂಗುದಾಣವನ್ನು ಒದಗಿಸುವುದು.<br><br>**<u>ಕಾರ್ಯಕ್ರಮದ ಉಪಘಟಕಗಳ ಹೆಸರು</u>**<br><br>1. ಸಾಮಾಜಿಕ ಕ್ರೋಢಿಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ. |

| | |
|---|---|
| | 2. ಸ್ವಯಂ ಉದ್ಯೋಗ ಕಾರ್ಯಕ್ರಮ.<br>3. ನಗರ ಬೀದಿ ಬದಿ ವ್ಯಾಪಾರಸ್ಥರಿಗೆ ಬೆಂಬಲ, ನಗರದ ವಸತಿ ರಹಿತರಿಗೆ ಆಶ್ರಯ.<br><br>**ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM):**<br>• ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮೂಲಕ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೇಂದ್ರ ಪುರಸ್ಕೃತ ದೀನ ದಯಾಳ್ ಗ್ರಾಮೀಣ ಕೌಶಲ್ಯ ಅಭಿವೃದ್ಧಿ ಯೋಜನೆ (ಡಿಡಿಯು-ಜಿಕೆವೈ) ಮತ್ತು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರ (ಆರ್‌ಸೆಟಿ) ಯೋಜನೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ BPL ಕುಟುಂಬದ ಯುವಕ-ಯುವತಿಯರಿಗೆ ವಿವಿಧ ರೀತಿಯ ಕೌಶಲ್ಯಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ಕೋರ್ಸ್‌ಗಳಡಿ ಉಚಿತ ತರಬೇತಿಗಳನ್ನು ನೀಡಲಾಗುತ್ತಿದೆ. ಪ್ರಮುಖವಾಗಿ ತರಬೇತಿ ಪೂರ್ಣಗೊಳಿಸಿದ ನಂತರ ಅವರಿಗೆ ವೇತನಾಧಾರಿತ ಉದ್ಯೋಗ/ಸ್ವ-ಉದ್ಯೋಗವನ್ನು ಕಲ್ಪಿಸಿ ಕೊಡುವುದು ಮುಖ್ಯ ಧ್ಯೇಯೋದ್ದೇಶವಾಗಿದೆ.<br><br>• ಡಿಡಿಯು-ಜಿಕೆವೈ ಕಾರ್ಯಕ್ರಮವನ್ನು ಶೇ.60:40 ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದಡಿ ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ಮತ್ತು ಆರ್‌ಸೆಟಿ ಕಾರ್ಯಕ್ರಮವನ್ನು ಶೇ.100 ಮತ್ತು ಕೇಂದ್ರ ಸರ್ಕಾರದ ಅನುದಾನದಡಿ ಜಿಲ್ಲಾ ಲೀಡ್ ಬ್ಯಾಂಕ್ ತರಬೇತಿ ಕೇಂದ್ರಗಳ ಮುಖಾಂತರ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. |
| (ಆ) ಸದರಿ ಜಿಲ್ಲೆಗಳಲ್ಲಿ ಈ ಯೋಜನೆ ಅಡಿಯಲ್ಲಿ ತೆರೆದಿರುವ ಕೌಶಲ್ಯ ಅಭಿವೃದ್ಧಿ ಕೇಂದ್ರಗಳೆಷ್ಟು ಮತ್ತು ಈ ಕೇಂದ್ರಗಳನ್ನು ನಡೆಸುತ್ತಿರುವ ಸಂಸ್ಥೆಗಳು ಯಾವುವು ಮತ್ತು ಅವುಗಳ ಜವಾಬ್ದಾರಿ ನಿರ್ವಹಣೆ ಬಗ್ಗೆ ಮೇಲುಸ್ತುವಾರಿಗೆ ಇರುವ ವ್ಯವಸ್ಥೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | **ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**<br>ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿ ಕಲಬುರಗಿ ಜಿಲ್ಲೆಯಲ್ಲಿ 22 ತರಬೇತಿ ಕೇಂದ್ರಗಳು ಮತ್ತು ಯಾದಗಿರಿ ಜಿಲ್ಲೆಯಲ್ಲಿ 6 ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ.<br>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ತೆರೆದಿರುವ ತರಬೇತಿ ಸಂಸ್ಥೆಗಳ ವಿವರವನ್ನು **ಅನುಬಂಧ-2** ರಲ್ಲಿ ವಿವರಿಸಿದೆ.<br>ಆ ಜಿಲ್ಲೆಗಳಲ್ಲಿ ಖಾಸಗಿ ತರಬೇತಿದಾರ ಸಂಸ್ಥೆಗಳೇ ಅವುಗಳ ನಿರ್ವಹಣೆಯನ್ನು ನಡೆಸುತ್ತಿದ್ದು, ಮೇಲುಸ್ತುವಾರಿಯನ್ನು ಮಾತ್ರ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ ಮುಖೇನ ಹಾಗೂ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮದ (NSDC) ಸಹಯೋಗದೊಂದಿಗೆ ಕೈಗೊಳ್ಳಲಾಗಿರುತ್ತದೆ.<br>**ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM):**<br>• **ದೀನ ದಯಾಳ್ ಗ್ರಾಮೀಣ ಕೌಶಲ್ಯ ಅಭಿವೃದ್ಧಿ ಯೋಜನೆ (ಡಿಡಿಯು-ಜಿಕೆವೈ):**<br>ಈ ಯೋಜನೆಯಡಿ ಕಲಬುರಗಿ ಜಿಲ್ಲೆಯಲ್ಲಿ ನಳಂದ ಎಜುಕೇಷನ್ ಸೊಸೈಟಿಯ ಒಂದು ತರಬೇತಿ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಯಾದಗಿರಿ ಜಿಲ್ಲೆಯಲ್ಲಿ ತರಬೇತಿ ಕೇಂದ್ರಗಳು ಇರುವುದಿಲ್ಲ.<br><br>• ಯೋಜನಾ ಅನುಷ್ಠಾನ ಸಂಸ್ಥೆಗಳ ನಿರ್ವಹಣೆಯನ್ನು ರಾಜ್ಯ ಮಟ್ಟದಲ್ಲಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ ಹಾಗೂ ಪ್ರತಿ ಜಿಲ್ಲೆಯಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮುಖ್ಯಸ್ಥರಾಗಿದ್ದು, ಜಿಲ್ಲಾ ಪಂಚಾಯತಿಯಡಿ ಸೃಜನೆಗೊಂಡಿರುವ ಜಿಲ್ಲಾ ಅಭಿಯಾನ ನಿರ್ವಹಣಾ ಘಟಕದ ಮೂಲಕ ಮೇಲ್ವುಸುವಾರಿಯನ್ನು ನಿರ್ವಹಿಸಲಾಗುತ್ತಿದೆ.<br><br>**ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರ (ಆರ್‌ಸೆಟಿ)**<br><br>• ಈ ಯೋಜನೆಯ ತರಬೇತಿ ಕೇಂದ್ರವನ್ನು ಜಿಲ್ಲಾ ಲೀಡ್ ಬ್ಯಾಂಕ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಸ್ಟೇಟ್ ಬ್ಯಾಂಕ್ ಇಂಡಿಯಾ ಆರ್‌ಸೆಟಿ ಸಂಸ್ಥೆಯು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. |

- ಈ ಕೇಂದ್ರಗಳನ್ನು ರಾಜ್ಯ ಮಟ್ಟದಲ್ಲಿ National Academy of RUDSETI ಸಂಸ್ಥೆಯು ಇದರ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ರಾಜ್ಯ ಮಟ್ಟದಲ್ಲಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ ಹಾಗೂ ಪ್ರತಿ ಜಿಲ್ಲೆಯಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮುಖ್ಯಸ್ಥರಾಗಿದ್ದು, ಜಿಲ್ಲಾ ಪಂಚಾಯತಿಯಡಿ ಸೃಜನೆಗೊಂಡಿರುವ ಜಿಲ್ಲಾ ಅಭಿಯಾನ ನಿರ್ವಹಣಾ ಘಟಕದ ಮೂಲಕ ಮೇಲ್ವುಸುವಾರಿಯನ್ನು ನಿರ್ವಹಿಸಲಾಗುತ್ತಿದೆ.

(ಇ) ಈ ಜಿಲ್ಲೆಗಳಲ್ಲಿ ಈ ಯೋಜನೆಯಡಿ ತರಬೇತಿ ಹೊಂದಿದ ಯುವಕ-ಯುವತಿಯರು ಎಷ್ಟು; ಇವರಲ್ಲಿ ಎಷ್ಟು ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ? (ವಿವರ ನೀಡುವುದು)

**<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)</u>**

ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಿವಿಧ ಜಾಬ್‌ರೋಲ್‌ವಾರು ಕೆಳಕಂಡಂತೆ ತರಬೇತಿ ಹೊಂದಿರುತ್ತಾರೆ. ಯಾವುದೇ ಉದ್ಯೋಗಾವಕಾಶ ಕಲ್ಪಿಸಿರುವುದಿಲ್ಲ.

| ಜಿಲ್ಲೆ | ತರಬೇತಿ ಪಡೆದ ಯುವಕರು | ತರಬೇತಿ ಪಡೆದ ಯುವತಿಯರು |
|---|---|---|
| ಕಲಬುರಗಿ | 1398 | 1283 |
| ಯಾದಗಿರಿ | 607 | 353 |

**<u>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM):</u>**

ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ತರಬೇತಿ ಹೊಂದಿ ಉದ್ಯೋಗ/ಸ್ವಯಂ ಉದ್ಯೋಗ ಹೊಂದಿದವರ ವಿವರ ಈ ಕೆಳಗಿನಂತಿದೆ.

- **<u>ದೀನ ದಯಾಳ್ ಗ್ರಾಮೀಣ ಕೌಶಲ್ಯ ಅಭಿವೃದ್ಧಿ ಯೋಜನೆ (ಡಿಡಿಯು-ಜಿಕೆವೈ)</u>**

| ಜಿಲ್ಲೆ | ತರಬೇತಿ ಹೊಂದಿದವರು | | ವೇತನಾಧಾರಿತ ಉದ್ಯೋಗ ಹೊಂದಿದವರು | |
|---|---|---|---|---|
| | ಯುವಕರು | ಯುವತಿಯರು | ಯುವಕರು | ಯುವತಿಯರು |
| ಕಲಬುರಗಿ | 1922 | 4050 | 756 | 1810 |
| ಯಾದಗಿರಿ | 320 | 448 | 93 | 221 |

- **<u>ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರ (ಆರ್‌ಸೆಟಿ)</u>**

| ಜಿಲ್ಲೆ | ತರಬೇತಿ ಹೊಂದಿದವರು | | | ಸ್ವಯಂ ಉದ್ಯೋಗ ಹೊಂದಿದವರು | | |
|---|---|---|---|---|---|---|
| | ಯುವಕರು | ಯುವತಿಯರು | ತೃತೀಯ ಲಿಂಗಿಗಳು | ಯುವಕರು | ಯುವತಿಯರು | ತೃತೀಯ ಲಿಂಗಿಗಳು |
| ಕಲಬುರಗಿ | 3691 | 6191 | 83 | 1651 | 4196 | 80 |
| ಯಾದಗಿರಿ | 2134 | 3978 | 119 | 1258 | 2697 | 114 |

ಸಂಖ್ಯೆ: ಕೌಉಜೀಇ 11 ಕೌಗುಪ್ರ 2024

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

## ಅನುಬಂಧ-1

Ministry of Skill Development and Entrepreneurship was established in 2014 with an overall objective to promote skilling and entrepreneurship development in India.

In 2015, MSDE launched its flagship scheme, Pradhan Mantri Kaushal Vikas Yojana (PMKVY), to encourage and promote skill development in the country by providing free short-duration skill training and incentivizing youth for skill certification.

The core principles of the scheme shall be as follows:

• Trainee / learner-centric from the earlier training provider-driven model.

• Planning from below, with District-level plans being the fundamental instruments for implementation.

• Enhance the role of State / UTs in entire implementation process of the scheme. Strengthening District Skill Committees (DSCs), State Skill Development Missions (SSDMs) / State Directorate of Technical Education or Skill Development through handholding, strategic and funding support.

• Create a pool of certified trainers for which direct funding shall be provided for the Training of Trainers (ToT) programs.

• Major focus on up-skilling / re-skilling with a focus on future skills (industry 4.0) courses to increase productivity of existing workforce.

**This scheme will have two components:**

• Centrally Sponsored Centrally Managed (CSCM) known as the Central Component to be implemented by the National Skill Development Corporation (NSDC).

• Centrally Sponsored State Managed (CSSM) known as the State Component to be implemented by the State Skill Development Missions (SSDMs) / respective Departments of the States / UTs.

**Implementation Strategy**

The scheme envisages working more closely with the State and District machineries through SSDMs and DSCs. DSCs would be playing a pivotal role under the guidance of SSDMs in PMKVY 3.0. In addition to mobilization, counselling and batch-formation, DSCs would also be involved in monitoring and supervision of the scheme at the district level, coordinating with nodal and other ITIs for implementation of STT, provide post-training support including handholding for placements / self-employment, verification of placements and grievance redressal.

Components of the Scheme Under the proposed scheme, skill training will be imparted into three categories, namely:

• Short Term Training (STT): The training under the STT courses generally range between 200-600 hours (2 to 6 months). The courses are National Skills Qualification Framework (NSQF) aligned and imparted at accredited & affiliated Training Centres. School / college dropouts or unemployed youth of Indian nationality shall benefit from the scheme. Successfully certified candidates shall be provided placement / entrepreneurship / apprenticeship assistance.

• Recognition of Prior Learning (RPL): RPL enables Indian youth to obtain industry-relevant skill certification. Individuals with prior learning experience or skills can register themselves and get assessed and certified under the RPL component of the scheme. RPL mainly focuses on the

individuals engaged in unregulated sectors. The duration of the training / orientation under RPL ranges between 12-80 hours.

• Special Projects: This component is meant for projects that require some deviation from the terms and conditions of Short-Term Training under PMKVY depending on special needs in terms of geography, demography and social groups. Special Projects component envisages training in special areas and / or premises of Government institutions, Corporates or Industry bodies, and trainings pertaining to special job roles that are not defined under the available Qualification Packs (QPs) / National Occupational Standards (NOSs). Financial outlay and physical target for the Special Projects will be the part of STT component of scheme.

Features under PMKVY 3.0

The scheme will be aligned with Common Cost Norms and National Skill Qualification Framework (NSQF). The amendment in these will be effective after approval from Steering Committee constituted under the scheme. Payment to Training Providers will be broken into tranches namely 30% on commencement of training batches, 40% on successful certification and 30% on placement verification subject to revisions by Common Cost Norms committee. Other incentives like boarding & lodging, post-placement support, conveyance and other support will be as per Common Cost Norms.

Padma. S

(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಅನುಬಂಧ-2

**PMKVY 2.0 & 3.0 - Kalburgi & Yadgiri District -Details of training providers, trainees Gender wise, and placements**

| Sl.No | Scheme Component | Training Provider Name | TC District | No. of Trained | | Placed |
|---|---|---|---|---|---|---|
| | | | | Male | Female | |
| 1 | PMKVY 2.0 - STT | A Plus Institute | KALABURAGI | 58 | 71 | 0 |
| 2 | PMKVY 2.0 - STT | CADMAXX SOLUTIONS PRIVATE LIMITED | KALABURAGI | 75 | 45 | 0 |
| 3 | PMKVY 2.0 - STT | Excelus Learning Solutions Pvt. Ltd. | KALABURAGI | 154 | 51 | 0 |
| 4 | PMKVY 2.0 - STT | S K COMPUTER INSTITUTE | KALABURAGI | 333 | 367 | 0 |
| 5 | PMKVY 3.0-RPL | Meritude Skill Development Private Limited | KALABURAGI | 76 | 1 | 0 |
| 6 | PMKVY 3.0-RPL | Narayan Training Services | KALABURAGI | 80 | 0 | 0 |
| 7 | PMKVY 3.0-STT | A Plus Institute | KALABURAGI | 29 | 21 | 0 |
| 8 | PMKVY 3.0-STT | CADMAXX SOLUTIONS PRIVATE LIMITED | KALABURAGI | 29 | 31 | 0 |
| 9 | PMKVY 3.0-STT | S K COMPUTER INSTITUTE | KALABURAGI | 55 | 55 | 0 |
| 10 | PMKVY 3.0-HSS-SP | A Plus Institute | KALABURAGI | 64 | 16 | 0 |
| 11 | PMKVY 3.0-HSS-SP | Aryan Computer Center Sedam | KALABURAGI | 30 | 20 | 0 |
| 12 | PMKVY 3.0-HSS-SP | Basava Siri Education Trust | KALABURAGI | 25 | 45 | 0 |
| 13 | PMKVY 3.0-HSS-SP | Excelus Learning Solutions Private Limited | KALABURAGI | 76 | 84 | 0 |
| 14 | PMKVY 3.0-HSS-SP | Helping Hands Foundation | KALABURAGI | 50 | 50 | 0 |
| 15 | PMKVY 3.0-HSS-SP | Hi-Tech Computers Infocity | KALABURAGI | 18 | 42 | 0 |
| 16 | PMKVY 3.0-HSS-SP | Kavita Computers and IT Services | KALABURAGI | 67 | 83 | 0 |
| 17 | PMKVY 3.0-HSS-SP | Macwin Info Solutions | KALABURAGI | 10 | 40 | 0 |
| 18 | PMKVY 3.0-HSS-SP | Meritude Skill Development Private Limited | KALABURAGI | 36 | 24 | 0 |
| 19 | PMKVY 3.0-HSS-SP | Shri Aditya Skill Academy | KALABURAGI | 4 | 26 | 0 |
| 20 | PMKVY 3.0-HSS-SP | SK Computer Institute | KALABURAGI | 32 | 28 | 0 |
| 21 | PMKVY 3.0-HSS-SP | State Institute of Health and Family Welfare | KALABURAGI | 30 | 30 | 0 |
| 22 | PMKVY 3.0-HSS-SP | Wipro GE Healthcare Pvt.Ltd. | KALABURAGI | 67 | 153 | 0 |
| | | | **Kalburgi District - Sub Total** | **1398** | **1283** | **0** |
| 23 | PMKVY 2.0-STT | Excelus Learning Solutions Pvt. Ltd. | YADGIRI | 189 | 111 | 0 |
| 24 | PMKVY 3.0-RPL | Narayan Training Services | YADGIRI | 99 | 71 | 0 |
| 25 | PMKVY 3.0-STT | Excelus Learning Solutions Pvt. Ltd. | YADGIRI | 46 | 44 | 0 |
| 26 | PMKVY 3.0-HSS-SP | Inturn Advisors Private Limited | YADGIRI | 68 | 32 | 0 |
| 27 | PMKVY 3.0-HSS-SP | Kairos Integrated Solutions Pvt Ltd | YADGIRI | 84 | 76 | 0 |
| 28 | PMKVY 3.0-HSS-SP | Wipro GE Healthcare Pvt.Ltd. | YADGIRI | 121 | 19 | 0 |
| | | | **Yadgiri District - Sub Total** | **607** | **353** | **0** |
| | | | **Total** | **2005** | **1636** | **0** |

(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.